

# ಗೆಲುವಿನ ಓಟದ ತವಕದಲ್ಲಿ ಆಂಟನಿ



**ಹೊಸ ಪ್ರತಿಭೆಗಳ ಪ್ರಯೋಗಗಳನ್ನು ಪ್ರೇಕ್ಷಕರು ಮೆಚ್ಚಿಕೊಳ್ಳುತ್ತಿರುವ ಸಂದರ್ಭದಲ್ಲಿ, ವಿನಯ್ ಅಭಿನಯದ 'ರನ್ ಆಂಟನಿ' ಗೆಲುವಿನ ನಿರೀಕ್ಷೆಗಳು ಹೆಚ್ಚಾಗಿವೆ.**

ಇಪ್ಪತ್ತೇಳು ವರ್ಷಗಳ ಹಿಂದೆ 'ನಂಜುಂಡಿ ಕಲ್ಯಾಣ' (1989) ತೆರೆಕಂಡ ಸಂದರ್ಭದಲ್ಲಿ ರಾಘವೇಂದ್ರ ರಾಜಕುಮಾರ್ ಅವರು ಅನುಭವಿಸಿದ ತವಕ–ತಲ್ಲಣ ಈಗ ಅವರ ಪುತ್ರ ವಿನಯ್ ರಾಜಕುಮಾರ್ ಅವರದು.

ರಾಘವೇಂದ್ರರ ಚೊಚ್ಚಿಲ ಸಿನಿಮಾ 'ಚಿರಂಜೀವಿ ಸುಧಾಕರ್' ಹೇಳಿಕೊಳ್ಳುವಂತಹ ಯಶಸ್ಸನ್ನೇನೂ ಪಡೆದಿರಲಿಲ್ಲ. ಹಾಗಾಗಿ, 'ನಂಜುಂಡಿ ಕಲ್ಯಾಣ' ಸಿನಿಮಾ ಅವರ ಪಾಲಿಗೆ ನಾಯಕನಾಗಿ ನೆಲೆ ಕಂಡುಕೊಳ್ಳಲು ಮಹತ್ವದ ಚಿತ್ರವಾಗಿ ಪರಿಣಮಿಸಿತ್ತು. 'ನಂಜುಂಡಿ ಕಲ್ಯಾಣ' ಬಹುದೊಡ್ಡ ಯಶಸ್ಸನ್ನು ಗಳಿಸುವ ಮೂಲಕ ರಾಘವೇಂದ್ರ ರಾಜಕುಮಾರ್ ಕನ್ನಡ ಚಿತ್ರರಸಿಕರ ಮನಸ್ಸು ಗೆದ್ದರು. ಆ ಸವಿನೆನಪು ಈಗ 'ರನ್ ಆಂಟನಿ' ಮೂಲಕ ಮರುಕಳಿಸಬಹುದೇ?

ವಿನಯ್ ಅವರ ಚೊಚ್ಚಿಲ ಸಿನಿಮಾ 'ಸಿದ್ಧಾರ್ಥ' ಸಹೃದಯರ ಮೆಚ್ಚುಗೆ ಗಳಿಸಿದರೂ, ಗಲ್ಲಾಪೆಟ್ಟಿಗೆಯಲ್ಲಿ ಬಹುದೊಡ್ಡ ಯಶಸ್ಸೇನೂ ಪಡೆಯಲಿಲ್ಲ. ಹಾಗಾಗಿ, ವಿನಯ್ ನಟನೆಯ ಎರಡನೇ ಚಿತ್ರ 'ರನ್ ಆಂಟನಿ' ಬಗ್ಗೆ ಗಾಂಧಿನಗರಕ್ಕೆ ಅಪಾರ ನಿರೀಕ್ಷೆಗಳಿವೆ. ಮಗನ ಈ ಚಿತ್ರದ ಬಗ್ಗೆ ಅಪ್ಪನ ಮುತುವರ್ಜಿ ಕೂಡ ಸಾಕಷ್ಟಿದೆ. ಪ್ರೇಮ್ ನಿರ್ದೇಶನದಲ್ಲಿ ಮುಹೂರ್ತ ನಡೆಸಿದ್ದ ಚಿತ್ರವನ್ನು ಕೈಬಿಟ್ಟು, ರಘುಶಾಸ್ತ್ರಿ ಎನ್ನುವ ಯುವ ನಿರ್ದೇಶಕನನ್ನು ಆರಿಸಿರುವುದು ಕೂಡ ಗೆಲುವಿನ ಗಣಿತದ ಭಾಗ ಆಗಿರುವಂತಿದೆ. ಚಿತ್ರದ ಟ್ರೇಲರ್, ಪೋಸ್ಟರ್ ಹಾಗೂ ಗೀತೆಗಳು ಕೆರಳಿಸಿರುವ ಕುತೂಹಲವನ್ನು ನೋಡಿದರೆ, ಈ ಆಯ್ಕೆ ಸರಿಯಾಗಿದೆ ಎನ್ನುವಂತಿದೆ.

ರಾಜ್ ಹುಟ್ಟುಹಬ್ಬಕ್ಕೆ ತೆರೆಕಾಣುವ ಹಂಬಲ ಹೊಂದಿದ್ದ 'ಆಂಟನಿ'ಯ ಬಿಡುಗಡೆ ದಿನಾಂಕ ಮುಂದಕ್ಕೆ ಹೋಗುತ್ತಲೇ ಬಂದಿದ್ದು, ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ.

ನಿರ್ದೇಶಕ ರಘು ಶಾಸ್ತ್ರಿ ಕೂಡ ತಮ್ಮ ಚೊಚ್ಚಿಲ ನಿರ್ದೇಶನದ ಸಿನಿಮಾ ಗೆಲ್ಲುವ ಬಗ್ಗೆ ಆಶಾಭಾವ ಹೊಂದಿದ್ದಾರೆ. ಚಿತ್ರೀಕರಣ ಮುಗಿದ ನಂತರವೂ, ಕೆಲವು ದೃಶ್ಯಗಳ ಮರು ಚಿತ್ರೀಕರಣ ನಡೆಸುವಷ್ಟರಮಟ್ಟಿಗೆ ಅಂತಿಮ ಪ್ರತಿಯನ್ನು ಓರಣಗೊಳಿಸಿದ್ದಾರಂತೆ. 'ಈ ಸಿನಿಮಾ ನನ್ನ ವೃತ್ತಿಜೀವನದಲ್ಲಿ ಎಂದೂ ಮರೆಯಲಾಗದಷ್ಟು ಅನುಭವವನ್ನು ನೀಡಿದೆ. ಮುಂದೆ ನೂರು ಸಿನಿಮಾ ಮಾಡಿದರೂ ಈ ಸಿನಿಮಾವನ್ನು ಮರೆಯಲು ಸಾಧ್ಯವೇ ಇಲ್ಲ' ಎಂದು ಭಾವುಕರಾಗುವ ಅವರಿಗೆ, 'ಆಂಟನಿ' ಮೂಲಕ ವಿನಯ್ ಇಮೇಜ್ ಬದಲಾಗುವ ವಿಶ್ವಾಸವಿದೆ.

ಗಾಂಧಿನಗರದಲ್ಲಿನ ಪ್ರಸಕ್ತ ಹವಾಮಾನ ಕೂಡ 'ಆಂಟನಿ' ಗೆಲುವಿಗೆ ಪೂರಕವಾಗಿದೆ. ಹೊಸಬರ ಚಿತ್ರಗಳನ್ನು, ಹೊಸ ಪ್ರಯೋಗಗಳನ್ನು ಪ್ರೇಕ್ಷಕ ಒಪ್ಪಿಕೊಳ್ಳುತ್ತಿರುವ ಸಂದರ್ಭವಿದು. ಇದೇ ಸಂದರ್ಭದಲ್ಲಿ ಥ್ರಿಲ್ಲರ್ ಕಥನಗಳು ಪ್ರೇಕ್ಷಕರ ಗಮನಸೆಳೆಯುತ್ತಿವೆ. 'ರನ್ ಆಂಟನಿ' ಕೂಡ ಥ್ರಿಲ್ಲರ್ ಕಥನವನ್ನೇ ಹೊಂದಿದೆಯಂತೆ. ಇದರ ಜೊತೆಗೆ ರುಕ್ಸರ್ ಹಾಗೂ ಸುಶ್ಮಿತಾ ಎನ್ನುವ ಇಬ್ಬರು ಚೆಲುವೆಯರು ವಿನಯ್‌ಗೆ ಜೋಡಿಯಾಗಿದ್ದು, ಪ್ರೇಮಕಥನದ ಕಾವು ಕೂಡ ಚಿತ್ರದಲ್ಲಿ ಜೋರಾಗಿರುವಂತಿದೆ. ದೇವರಾಜ್, ಬುಲೆಟ್ ಪ್ರಕಾಶ್ ತಾರಾಗಣದಲ್ಲಿರುವ ಪ್ರಮುಖರು.

■ ರಘು